ಅ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಉದ್ಯಾನವನ ನಿರ್ಮಿಸುವುದರ ಬಗ್ಗೆ

486 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಗಾರ್ಡನ್ ಸಲುವಾಗಿ ಕಾಯ್ದಿರಿಸಲಾದ ಜಾಗಗಳಲ್ಲಿ ಅಚ್ಚುಕಟ್ಟಾದ ಉದ್ಯಾನವನ ನಿರ್ಮಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? ಈ ಉದ್ಯಾನವನ ನಿರ್ವಹಣೆ ಕೆಲಸವನ್ನು ಖಾಸಗಿಯವರು ಮುಂದೆ ಬಂದಲ್ಲಿ ಅವರಿಗೆ ವಹಿಸಲು ಸರ್ಕಾರ ಸಿದ್ದವಿದೆಯೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ) :

ಅ) ಇದೆ.

ಆ) ಉದ್ಯಾನವನ ಹಾಗೂ ವರ್ತುಳಗಳ ಅಭಿವೃದ್ಧಿ ಹಾಗೂ ಸಂಸ್ಕರಣೆ ವ್ಯವಸ್ಥೆಯನ್ನು ಮಹಾನಗರ ಸಭೆಯು ಖಾಸಗಿ ಸಂಸ್ಥೆಗಳಿಗೆ ಸಂಯುಕ್ತ ಆಶ್ರಯದಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನಿಸಿದ್ದು, ಈ ಬಗ್ಗೆ ಸಂಘ ಸಂಸ್ಥೆಗಳು ಮುಂದೆ ಬಂದಲ್ಲಿ ಮೂರು ವರ್ಷಗಳ ಮಟ್ಟಿಗೆ ಕೊಡಲಾಗುವುದು.

ಹುಬ್ಬಳ್ಳಿ ಮಹಾನಗರಕ್ಕೆ ಪ್ರವೇಶ ಮಾಡುವ ಸ್ಥಳದಲ್ಲಿ ಮಹಾದ್ವಾರ ನಿರ್ಮಾಣ

487 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹಾನಗರವನ್ನು ಪ್ರವೇಶ ಮಾಡುವ ಸ್ಥಳಗಳಲ್ಲಿ ಗಬ್ಬೂರು ಮತ್ತು ಅಂಚಿಟಗೇರಿ ಹತ್ತಿರ ಮಹಾದ್ವಾರಗಳನ್ನು ನಿರ್ಮಿಸುವ ವಿಚಾರ ಸರ್ಕಾರಕ್ಕೆ ಇದೆಯೆ? ಇದಲ್ಲಿ ಆ ಕುರಿತು ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಇದೆ.

ಈ ಎರಡು ಸ್ಥಳಗಳು ಕ್ರಮವಾಗಿ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳಿಗೆ ಹತ್ತಿರವಿದೆ. ಈ ಬಗ್ಗೆ ಸಂಬಂಧಿಸಿದವರೊಂದಿಗೆ ಚರ್ಚಿಸಿ ಒಪ್ಪಿಗೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದಕ್ಕಾಗಿ ನಗರಪಾಲಿಕೆಯೂ ಈ ವರ್ಷದ ಆಯವ್ಯಯದಲ್ಲಿ ರೂ. 2 ಲಕ್ಷಗಳನ್ನು ಕಾಯ್ದಿರಿಸಿದೆ.

ರಾಜ್ಯದಲ್ಲಿರುವ ಪುರಸಭೆ, ನಗರಸಭೆ ಮಹಾನಗರಪಾಲಿಕೆ ಸಂಖ್ಯೆ

488 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪುರಸಭೆ, ನಗರಸಭೆ ಮಹಾನಗರಪಾಲಿಕೆಗಳ ಸಂಖ್ಯೆ ಎಷ್ಟು?

ಆ) ಇತ್ತೀಚೆಗೆ ಎಷ್ಟು ಗ್ರಾಮಪಂಚಾಯತ್ ಗಳನ್ನು ಪುರಸಭೆಗಳಾಗಿ ಮಾರ್ಪಡಿಸಲಾಯಿತು? (ವಿವರ ನೀಡುವುದು)